ಶ್ರೀ ಎನ್. ಯೋಗೀಶ್ ಭಟ್ : ಅಧ್ಯಕ್ಷರೆ, ಮಂಗಳೂರಿನ ಸಬ್‌ಜೈಲ್‌ನಲ್ಲಿ 8 ರೈಫಲ್ ಇದೆ. ಅವುಗಳಿಗೆ ತುಕ್ಕು ಹಿಡಿದು ಉಪಯೋಗ ಮಾಡದ ಸ್ಥಿತಿಯಲ್ಲಿದೆ. ಅದು ಇನ್ನೂ ರಿಪೇರಿಯಾಗಿಬಂದಿಲ್ಲ, ಸನ್ಮಾನ್ಯ ಕಾರಾಗೃಹ ಸಚಿವರಲ್ಲಿ ಕೇಳುವುದೇನೆಂದರೆ. ತಾವು ಸಬ್‌ಜೈಲುಗಳನ್ನು ಕಡೆಗಣಿಸಬೇಡಿ.

ಅಧ್ಯಕ್ಷರು : ಅದು ಬೇರೆ ಪ್ರಶ್ನೆಯಾಗುತ್ತದೆ. ಅದಕ್ಕೆ ಉತ್ತರವನ್ನೆಲ್ಲಿಂದ ತಂದು ಕೊಡುತ್ತಾರೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅಧ್ಯಕ್ಷರೆ, ನಾನು 15 ದಿವಸ ಜೈಲಿನಲ್ಲಿದ್ದು ಬಂದವನು, ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಅಧ್ಯಕ್ಷರು : ನನ್ನ ಆಸೆ, ಇನ್ನು ಮುಂದೆ ನೀವ್ಯಾರೂ ಜೈಲಿಗೆ ಹೋಗಬಾರದೆಂದು.

ಶ್ರೀ ವಾಟಾಳ್ ನಾಗರಾಜ್ : ಇಂಥ ಪರಿಸ್ಥಿತಿಯಲ್ಲಿ ದಯಮಾಡಿ ನಮ್ಮನ್ನು ಯಾವಾಗಲೂ ಜೈಲಿಗೆ ಕಳಿಸಬೇಡಿ.

ಅಧ್ಯಕ್ಷರು : ನಿಮ್ಮನ್ನು ಯಾವ ಸಂದರ್ಭದಲ್ಲೂ ಸಹ ಜೈಲಿಗೆ ಕಳಿಸುವುದಿಲ್ಲವೆಂದು ನಾವು ಮತ್ತು ಬಂಗಾರಪ್ಪನವರು ಮಾತನಾಡಿಕೊಂಡಿದ್ದೇವೆ.

ರಾಜಾಜಿನಗರದ ವಾಟಾಳ್ ನಾಗರಾಜ್ ರಸ್ತೆಯಲ್ಲಿ ಹೆಚ್ಚಿನ ವಾಹನ ಸಂಚಾರ

225 - ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜಾಜಿನಗರದ ರಾಂಕುಮಾರ್ ಮಿಲ್ಸ್ ಬಳಿ ಇರುವ ಪ್ರವೇಶದ್ವಾರದಿಂದ ನಗರ ರೈಲ್ವೆ ಸ್ಟೇಷನ್ ಮಧ್ಯ ವಾಹನ ಸಂಚಾರ ಬಹಳವಾಗಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು. ಈ ಭಾಗದಲ್ಲಿ ಫ್ಲೈಓವರ್ ಅಥವಾ ಸುರಂಗಮಾರ್ಗ ಮಾಡುವ ಯೋಜನೆ ಏನಾದರೂ ಸರ್ಕಾರದವರ ಮುಂದಿದೆಯೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) 1) ರಾಜಾಜಿನಗರ ರಾಂಕುಮಾರ್ ಮಿಲ್ಸ್ ಬಳಿ ಇರುವ ಪ್ರವೇಶದ್ವಾರದಿಂದ ನಗರ ರೈಲ್ವೆ ಸ್ಟೇಷನ್ ಮಧ್ಯೆ ವಾಹನ ಸಂಚಾರ ಬಹಳವಾಗಿ ಜಾಸ್ತಿಯಾಗಿರುತ್ತದೆ. ಈ ರಸ್ತೆಯಲ್ಲಿ ಅಪಘಾತಗಳು ಸಂಭವಿಸುವ ಜಾಗಗಳನ್ನು ಗುರ್ತಿಸಿ ಎಚ್ಚರಿಕೆಯ ನಾಮಫಲಕಗಳನ್ನು ಅಳವಡಿಸಲಾಗಿರುತ್ತೆ.

2) ರಾಜಾಜಿನಗರ ರಾಂಕುಮಾರ್ ಮಿಲ್ಸ್ ಬಳಿ ಇರುವ ಪ್ರವೇಶದ್ವಾರದಿಂದ ನಗರದ ರೈಲ್ವೆ ಸ್ಟೇಷನ್‌ವರೆಗೆ ಈ ರಸ್ತೆಯಲ್ಲಿ ಅತಿ ಮುಖ್ಯವಾದ ವೃತ್ತಗಳಲ್ಲಿ (1) ಫೌಂಟನ್ ಸರ್ಕಲ್ (2) ಪ್ಲಾಟ್‌ಫಾರಂ ಜಂಕ್ಷನ್ (3) ಓಕಳಿಪುರಂ (4) ಮಾಗಡಿ ರೋಡ್ ಜಂಕ್ಷನ್ (5) ರಾಜಾಜಿನಗರ ಮುಖ್ಯದ್ವಾರ ಈ ಸ್ಥಳಗಳಲ್ಲಿ ವಿಕಕಾಲಿಕ ಸ್ವಯಂಚಾಲಿತ ಸಂಚಾರ ದೀಪಗಳನ್ನು ಅಳವಡಿಸಲಾಗಿದೆ. ಈ ರಸ್ತೆಯಲ್ಲಿ ವಿಶೇಷ ಗಮನ ಹರಿಸಿ ಅತಿ ವೇಗ ಮತ್ತು ಅಜಾಗರೂಕತೆಯಿಂದ ವಾಹನಗಳನ್ನು ಚಲಿಸುವ ಚಾಲಕರುಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿ ಅಪಘಾತಗಳು ಸಂಭವಿಸದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

3) ಈ ರಸ್ತೆಯಲ್ಲಿ ಸಿಬ್ಬಂದಿ ವರ್ಗದವರನ್ನು ನೇಮಿಸಿ ಸಂಚಾರಿ ನಿಯಂತ್ರಣವನ್ನು ನೇಮಿಸಿ ಸಂಚಾರಿ ನಿಯಂತ್ರಣವನ್ನು ಮಾಡಲಾಗುತ್ತಿದೆ.

4) ಈ ರಸ್ತೆಯನ್ನು ದಾಟಲು ಸೂಕ್ತ ಸ್ಥಳಗಳನ್ನು ಗುರ್ತಿಸಿ ಬಣ್ಣವನ್ನು ಬಳಿದು ಪಾದಚಾರಿಗಳಿಗೆ ರಸ್ತೆಯನ್ನು ದಾಟಲು ಅನುವು ಮಾಡಿಕೊಡಲಾಗಿರುತ್ತೆ ಹಾಗೂ ಸೂಕ್ತ ಸೂಚನಾ ಫಲಕಗಳನ್ನು ಅಳವಡಿಸಿ ವಾಹನ ಚಾಲಕರಿಗೆ ಎಚ್ಚರಿಕೆಯನ್ನು ಕೊಡಲಾಗುತ್ತಿದೆ.

5) ಈ ರಸ್ತೆಯಲ್ಲಿ ಸೆಂಟರ್ ಮೀಡಿಯನ್ (ಸ್ಟೋನ್) ಹಾಕಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತೆ. ಬೆಂಗಳೂರು ಮೆಗಾಸಿಟಿ ಪ್ರಾಜೆಕ್ಟ್‌ನಲ್ಲಿ ಮುಖ್ಯ ವೃತ್ತಗಳಲ್ಲಿ ಅಂದರೆ 1. ಫೌಂಟನ್ ಸರ್ಕಲ್ 2. ರಾಜಾಜಿನಗರ ಎಂಟ್ರನ್ಸ್‌ನಲ್ಲಿ ಫ್ಲೈ ಓವರ್ ಅನ್ನು ನಿರ್ಮಿಸುವ ಬಗ್ಗೆ ಪ್ರಸ್ತಾಪ ಇದೆ.

6) ಸುಜಾತ ಥಿಯೇಟರ್ ಬಳಿ ಇರುವ ಸೇತುವೆಯನ್ನು ಅಗಲ ಮಾಡುವ ಕೆಲಸ ಪ್ರಗತಿಯಲ್ಲಿ ಇದೆ.

ಶ್ರೀ ಎಸ್. ಸುರೇಶ್‌ಕುಮಾರ್ ಸನ್ಮಾನ್ಯ ಅಧ್ಯಕ್ಷರೆ, ವಾಟಾಳ್ ನಾಗರಾಜ್ ರಸ್ತೆಯೆಂದು ನಾವೇನು ಕರೆಯುತ್ತಿದ್ದೇವೆ, ಅಲ್ಲಿ ರಾಜಾಜಿನಗರದ ರಾಮಕುಮಾರ್ ಮಿಲ್ಸ್ ಬಳಿ ಇರುವ ಪ್ರವೇಶದ್ವಾರದಿಂದ ನಗರ ರೈಲ್ವೆ ಸ್ಟೇಷನ್ ಮಧ್ಯ, ವಾಹನ ಸಂಚಾರ ಬಹಳವಾಗಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದರೆ, ಅದಕ್ಕೆ ಬಂದಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾವೇನು ಪ್ರಯತ್ನ ಪಡುತ್ತಿದ್ದೇವೆ ಎನ್ನತಕ್ಕದ್ದು ಕೇವಲ ಕೆಲವು ಕಾನ್‌ಮೆಟಿಕ್ಸ್ ಮೆಜರ್ಸ್‌ನ್ನು ತೆಗೆದುಕೊಂಡು ಹೇಳಿರುವುದನ್ನು ಬಿಟ್ಟರೆ ಬೇರೇನೂ ಇಲ್ಲ. ಈಗ ಅಲ್ಲಿ ಪಕ್ಕದಲ್ಲಿ ಮಿನರ್ವಾಮಿಲ್‌ನ ಆವರಣವಿದೆ, ಅಲ್ಲಿ ರಸ್ತೆಯನ್ನು ವಿಸ್ತರಣೆ ಮಾಡುವ ಕೆಲಸ ಪ್ರಾರಂಭ ಮಾಡಿದ್ದು ಅದು ಯಾವ ಹಂತದಲ್ಲಿದೆ, ಎರಡನೆಯದಾಗಿ, ಸುಜಾತ ಚಿತ್ರಮಂದಿರದ ಬಳಿ ಇಳಿದವರು ಯಾವುದೇ ರೀತಿಯಾದ ಪ್ರಯಾಣಿಕರಿರಬಹುದು ಈ ವಾಹನದ ದಟ್ಟಣೆಯ ಮಧ್ಯ ಯಾವ ರೀತಿ ಆ ರಸ್ತೆಯನ್ನು ದಾಟುತ್ತಾರೆ? ಅನಂತರ, ಮೆಗಾಸಿಟಿ ಪ್ರಾಜೆಕ್ಟ್‌ನಲ್ಲಿ ಇದರ ಪ್ರಸ್ತಾಪವಿದೆಯೆಂದು ಉತ್ತರವನ್ನು ಕೊಟ್ಟಿದ್ದಾರೆ. ನನಗನ್ನಿಸುತ್ತದೆ ಇದು ಸತ್ಯವಲ್ಲ. ಮೆಗಾಸಿಟಿ ಪ್ರಾಜೆಕ್ಟ್‌ನಲ್ಲಿರುವ ಪ್ರಸ್ತಾಪಗಳು ಬಿರನ್ ಅಂಡ್ ಸ್ಟೀಲ್ ಮಾರ್ಕೆಟ್ ಯಾರ್ಡ್ ಏನಿದೆ ಅದನ್ನು ಶಿಫ್ಟ್ ಮಾಡುವುದು, ನಂದಿನಿ ಲೇಔಟ್ ಮತ್ತು ಜೆ.ಪಿ. ನಗರದಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟುವುದು ಮೂರನೆಯದಾಗಿ ಮಲ್ಟಿ ಸ್ಟೋರ್ಡ್ ಕಾರ್ ಪಾರ್ಕಿಂಗ್ ಪ್ರಸ್ತಾಪಗಳಿವೆ. ಆದರೆ ಉತ್ತರದಲ್ಲಿ ಅಲ್ಲಿ ಫ್ಲೈಓವರ್ ನಿರ್ಮಿಸುವ ಪ್ರಸ್ತಾಪವಿದೆಯೆಂದು ಹೇಳಿದ್ದೀರಿ. ಇದು ಸತ್ಯವಲ್ಲವೆಂದು ನನ್ನ ಭಾವನೆ. ದಯಮಾಡಿ ಅವರು ಇದಕ್ಕೆ ಉತ್ತರವನ್ನು ಕೊಡಬೇಕು.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಈ ಮೆಗಾಸಿಟಿ ಯೋಜನೆ ಏನಿದೆ ಅದು ಬೆಂಗಳೂರು ನಗರದಲ್ಲಿ ಅಮಲಿನಲ್ಲಿ ಬಂದಾಗ, ಈ ಫ್ಲೈ ಓವರ್ ಪದ್ಧತಿಯನ್ನು ಆ ಭಾಗದಲ್ಲಿ ಮಾಡುವ ಬಗ್ಗೆ ನಿರ್ಣಯವಾಗಿದೆ. ಆದರೆ ಇದರ ಬಗ್ಗೆ ವಿವರವಾಗಿ ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ ಕೆಲವೊಂದು ವಿಶೇಷವಾದ ಪ್ರಕರಣಗಳನ್ನು ಅಲ್ಲಿ ತಿಳಿಸಲಾಗಿದೆಯೇ ವಿನಹ ವಿವರವಾಗಿ ತಿಳಿಸಲಾಗಿಲ್ಲ. ಆದರೆ Standing Committee on Traffic Congestion ಎನ್ನತಕ್ಕ ಸಮಿತಿಯಲ್ಲಿ ಈ ವಿಚಾರಗಳನ್ನು ಚರ್ಚೆ ಮಾಡಿ, ಈ ಭಾಗದಲ್ಲಿ ಯಾವ ವ್ಯವಸ್ಥೆಯನ್ನು ಮಾಡಬೇಕು ಎಂದು ನಿರ್ಧಾರ ಮಾಡಿದ್ದಾರೆ, ಅದರಲ್ಲಿ ಎರಡು ವಿಭಾಗಗಳನ್ನು ಕೂಡಲೆ ತೆಗೆದುಕೊಳ್ಳತಕ್ಕದ್ದು, ಅನಂತರ ಸಾಮಾನ್ಯವಾದ ವಿಚಾರಗಳೆಂದು ನಿರ್ಣಯ ಮಾಡಿದ್ದಾರೆ. ಅದರ ಪ್ರಕಾರ ಉತ್ತರದಲ್ಲಿ ತೋರಿಸಿರುವಂತೆ ವ್ಯವಸ್ಥೆ ಮಾಡಲಾಗಿದೆ. ತಾವು ಹೇಳಿದಂತೆ ರಸ್ತೆಯನ್ನು ದಾಟಲು ಅಲ್ಲಿ ವಿಶೇಷವಾದಂಥ ಬಣ್ಣದ ಪಟ್ಟಿಗಳನ್ನು ಮಾಡಿ ಜನರಿಗೆ ಅನುಕೂಲ ಮಾಡಿಕೊಡುವಂಥ ವ್ಯವಸ್ಥೆ ಮಾಡಿದ್ದೇವೆ. ಅಲ್ಲಿ ಫ್ಲೈಓವರ್ ಮಾಡದೆಯೇ ಈ ಸಮಸ್ಯೆಯನ್ನು ನಿವಾರಣೆ ಮಾಡಲು ಸಾಧ್ಯವಿಲ್ಲ ಎನ್ನತಕ್ಕದನ್ನು

ಒಪ್ಪಿಕೊಳ್ಳುತ್ತೇನೆ. ಆದರೂ ಸಹ ಇರತಕ್ಕ ಸ್ಥಿತಿಯಲ್ಲಿಯೇ ಜನರಿಗೆ ಯಾವ ಪ್ರಮಾಣದಲ್ಲಿ ತೊಂದರೆಯಾಗಬೇಕಾಗಿತ್ತೋ ಅದು ಕಡಿಮೆಯಾಗಿದೆ ಎನ್ನತಕ್ಕ ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಿನರ್ವಾಮಿಲ್ಸ್‌ನ ಆವರಣದ ಪಕ್ಕದಲ್ಲಿ ರಸ್ತೆಯನ್ನು ವಿಸ್ತರಣೆ ಮಾಡುವ ಕೆಲಸ ಪ್ರಾರಂಭವಾಗಿತ್ತು, ಈಗ ಆ ಕೆಲಸದ ಪ್ರಗತಿ ಎಲ್ಲಿಯವರೆಗೆ ಆಗಿದೆ.

ಶ್ರೀ ಕೆ.ಎಸ್. ಬೀಳಗಿ : ಅದರ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡು ಹೇಳುತ್ತೇನೆ.

ಶ್ರೀ ಬಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್‌ಕುಮಾರ್‌ರವರೇನು ಪ್ರಶ್ನೆಯನ್ನು ಕೇಳಿದ್ದರು, ಸಿಟಿ ರೈಲು ನಿರ್ಮಾಣದಿಂದ ವಾಟಾಳ್‌ನಾಗರಾಜ್ ಮಾರ್ಗಕ್ಕೆ ಹೋಗುವಾಗ ಸುಜಾತ ಚಿತ್ರಮಂದಿರವೆನ್ನತಕ್ಕದ್ದು ಇದೆ, ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದೆ. ಅಲ್ಲಿ ನೂರಾರು ರಾಮಚಂದ್ರಪುರಕ್ಕೆ ಬಲಗಡೆ ತಿರುಗಬೇಕಾದರೆ, ರಾಜಾಜಿನಗರಕ್ಕೆ ಹೋಗಿ ರಾಮಕುಮಾರ್ ಮಿಲ್ಸ್‌ನ್ನು ದಾಟಿ ಮತ್ತೆ ಬರಬೇಕು, ಅಲ್ಲಿ ಬಹಳ ಸಂಚಾರಿ ಒತ್ತಡವಿರುವುದರಿಂದ ಸುರಂಗ ಮಾರ್ಗ ಮಾಡಿ ರಾಮಚಂದ್ರಪುರಕ್ಕೆ ಬಲಕ್ಕೆ ತಿರುವು ಕೊಡಬೇಕೆಂದು ಬಹಳ ದಿವಸಗಳಿಂದ ಬೇಡಿಕೆ ಇದೆ, ಅದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಬೇಕು. ಬಸವೇಶ್ವರ ನಗರ, ಮಾಗಡಿ ರಸ್ತೆ, ರಾಜಾಜಿನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಹೋಗಬೇಕಾಗಿರುವ ಎಲ್ಲಾ ವಾಹನಗಳೂ ಸಹ ಅಲ್ಲಿಯೇ ಹೋಗಬೇಕಾಗಿದೆ. ಆದ್ದರಿಂದ ದಯವಿಟ್ಟು ಸರ್ಕಾರ ಇದರ ಬಗ್ಗೆ ತೀವ್ರವಾದ ಪರಿಶೀಲನೆ ಮಾಡಿ ಕ್ರಮತೆಗೆದುಕೊಳ್ಳಬೇಕು.

ಅಧ್ಯಕ್ಷರು : ಯೋಗ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ, ಪರಿಶೀಲನೆ ಮಾಡಿ.

ಕರ್ನಾಟಕ ಲೋಕಾಯುಕ್ತ ಸಾಬೀತು ಪಡಿಸಲಾಗಿರುವ ಪ್ರಕರಣಗಳು

92-ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಲೋಕಾಯುಕ್ತವು ಇದುವರೆವಿಗೆ ಎಷ್ಟು ಪ್ರಕರಣಗಳಲ್ಲಿ ಭ್ರಷ್ಟಚಾರ ಮತ್ತು ಕ್ರಿಮಿನಲ್ ಸ್ವರೂಪದ ಆರೋಪಗಳನ್ನು ಸಾಬೀತು ಪಡಿಸಿರುತ್ತದೆ.

ಆ) ಸಾಬೀತು ಪಡಿಸಿರುವ ಪ್ರಕರಣಗಳಲ್ಲಿ ಸರ್ಕಾರ ಎಷ್ಟು ಜನರ ಮೇಲೆ ಕ್ರಮ ಕೈಗೊಂಡಿರುತ್ತದೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 43

ಆ) 5 ಪ್ರಕರಣಗಳಲ್ಲಿ ಸರ್ಕಾರಿ ನೌಕರರನ್ನು ಸೇವೆಯಿಂದ ವಜಾ ಮಾಡಿದೆ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತದವರು ಇದುವರೆಗೆ ಸುಮಾರು 43ಪ್ರಕರಣಗಳಲ್ಲಿ ಭ್ರಷ್ಟಾಚಾರ ಮತ್ತು ಕ್ರಿಮಿನಲ್ ಸ್ವರೂಪದ ಆರೋಪಗಳನ್ನು ಸಾಬೀತುಪಡಿಸಿದ್ದಾರೆ. ಅದರಲ್ಲಿ ಕೇವಲ 5 ಜನ ಸರ್ಕಾರಿ ನೌಕರರ ಮೇಲೆ ಕ್ರಮತೆಗೆದುಕೊಂಡಿದ್ದಾರೆ. ಉಳಿದ 35 ಜನರ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಅವರು ಏಕೆ ಇನ್ನೂ ಕೆಲಸದಲ್ಲಿ ಮುಂದುವರೆದುಕೊಂಡು ಹೋಗುತ್ತಿದ್ದಾರೆ? 38 ಜನರಲ್ಲಿ ಎಷ್ಟು ಜನರಿಗೆ ಬಡ್ತಿ ಸಿಕ್ಕಿದೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕು.